**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 64/2021 |
| ಸಿ.ಡಬ್ಲ್ಯೂ | : 04 |
| ಪಿ.ಡಬ್ಲ್ಯೂ | : 03 |
| ಸಾಕ್ಷಿಯ ಹೆಸರು | : ಗೀತವ್ವ ಯಲ್ಲಪ್ಪ ಚಲವಾದಿ |
| ವಯಸ್ಸು | : 45 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಗುಡಿಸಾಗರ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 23.01.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ನನ್ನ ಸಂಬಂಧಿಕರು. ಚಾಸಾ-1 ಮತ್ತು 5 ನನ್ನ ಮಕ್ಕಳು. ಚಾಸಾ-6 ರವರ ಪರಿಚಯವಿಲ್ಲ.

ಈಗ ಅಂದಾಜು 7-8 ವರ್ಷಗಳ ಹಿಂದೆ ನಾನು, ಚಾಸಾ-1 ರವರು ಕುಳಿತುಕೊಂಡಿದ್ದಾಗ 2 ನೇ ಆರೋಪಿ ಗರ್ಭಿಣಿಯಾಗಿದ್ದ ಚಾಸಾ-1 ರವರಿಗೆ ಕಟ್ಟಿಗೆಯಿಂದ ಬೆನ್ನಿಗೆ ಹೊಡೆಬಡೆ ಮಾಡಿರುತ್ತಾನೆ. 1 ನೇ ಆರೋಪಿಯು ಸಹ ಚಾಸಾ-1 ರವರ ಬೆನ್ನಿಗೆ ಕೈಯಿಂದ ಹೊಡೆದಿರುತ್ತಾರೆ. ನಂತರ ಚಾಸಾ-1 ರವರನ್ನು ನವಲಗುಂದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ಸದರಿ ಘಟನೆಯು ದಿಃ 25-07-2017 ರಂದು ಸಂ.04.30 ಗಂಟೆಗೆ ಆಗಿರುತ್ತದೆ ಎಂದರೆ ಸರಿ. 1 ನೇ ಆರೋಪಿ ನನ್ನ ದುಬ್ಬಕ್ಕೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರ ಹೊಟ್ಟೆಗೆ ಒದ್ದು, ಕೆಳಗೆ ಬಿಳಿಸಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾನೆ ಎಂದರೆ ಸರಿ. ನಂತರ ಚಾಸಾ-6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದಃ</u>**

1 ನೇ ಆರೋಪಿಯ ಗಂಡ ನನಗೆ ಅಣ್ಣನಾಗಬೇಕು. ಸದರಿಯವರ ಮನೆ ನಮ್ಮ ಮನೆಯಾದ 4 ಮನೆಗಳಾದ ನಂತರ ಇದೆ. ನಮ್ಮ ಮನೆ ಹಾಗೂ ಆರೋಪಿತರ ಮನೆಯ ನಡುವೆ ನಿಂಗಬಸವ್ವ, ಯಲ್ಲಮ್ಮ ಹಾಗೂ ಸಿದ್ಧಪ್ಪ ರವರ ಮನೆಗಳಿವೆ. ಸದರಿ ಸಿದ್ಧಪ್ಪ 1 ನೇ ಆರೋಪಿಯ ಗಂಡನ ಸಹೋದರ ಎಂದರೆ ಸರಿ. ನನ್ನನ್ನು ಮೆಣಸಗಿ ಗ್ರಾಮದ ವ್ಯಕ್ತಿಗೆ ವಿವಾಹ ಮಾಡಿ ಕೊಡಲಾಗಿದೆ. ಆದರೆ ನಾನು ಕಳೆದ 20 ವರ್ಷಗಳಿಂದ ನನ್ನ ತವರು ಮನೆಯಲ್ಲಿ ವಾಸವಿದ್ದೇನೆ. ನನ್ನ ಸಹೋದರರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ತವರು ಮನೆಯ ಜಮೀನನ್ನು ನಾನೇ ನೋಡಿಕೊಂಡು ತವರು ಮನೆಯ ಆಸ್ತಿಯಲ್ಲಿ ವಾಸವಿದ್ದೇನೆ ಎಂದರೆ ಸರಿ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ವಿಷಯವಾಗಿ ಆರೋಪಿತರು ನನ್ನೊಂದಿಗೆ ಪಾಲು ಕೇಳುತ್ತಿದ್ದರು ಎಂದರೆ ಸರಿಯಲ್ಲ. ಸದರಿಯವರು ಆಸ್ತಿ ಕೇಳಿದ್ದಕ್ಕೆ ಚಾಸಾ-1 ರವರ ಮುಖಾಂತರ ನಾನು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆಬಡೆ ಮಾಡಿಲ್ಲ, ಅವಾಚ್ಯವಾಗಿ ಬೈದಿಲ್ಲ, ಮಾನಭಂಗ ಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-6 ರವರು ಜಗಳ ಬಿಡಿಸಿಲ್ಲ ಹಾಗೂ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**